imma™

# Hosa Digantha

## Apeejay surrendra group volunteer Awards

**Date: 29-04-2011 | Edition: Bangalore | Page: 10 | Source: Bureau | Clip size (cm): W: 9 H: 6**

**Clip: 1 of 1**

### ಅಪೀಜೆ ಸುರೇಂದ್ರ ಗ್ರೂಪ್‌ನಿಂದ ಸ್ವಯಂ ಸೇವಕ ಪ್ರಶಸ್ತಿ

**ಬೆಂಗಳೂರು:** ಹತ್ತನೇ ಅಂತಾರಾಷ್ಟ್ರೀಯ ಸ್ವಯಂಸೇವಾ ವರ್ಷಾಚರಣೆ ಅಂಗವಾಗಿ ಅಪೀಜೆ ಸುರೇಂದ್ರ ಗ್ರೂಪ್. ಐ-ವಾಲಂಟೀರ್ ಮತ್ತು ಯುಕೆಯ ಅಂತಾರಾಷ್ಟ್ರೀಯ ವ್ಯವಹಾರ ನಾಯಕರ ವೇದಿಕೆ ಸಹಯೋಗದಲ್ಲಿ ಅಪೀಜೆ ಭಾರತೀಯ ಸ್ವಯಂಸೇವಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಕುರಿತು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅಪೀಜೆ ಸುರೇಂದ್ರ ಗ್ರೂಪ್‌ನ ಕಾರ್ಪೊರೇಟ್ ಸಂವಹನ ವಿಭಾಗದ ಉಪಾಧ್ಯಕ್ಷೆ ರೇಣು ಕಕ್ಕರ್, ಸ್ವಯಂ ಸೇವಾ ಕ್ಷೇತ್ರದಲ್ಲಿ ಶ್ರೇಷ್ಠರನ್ನು ಪತ್ತೆ ಮಾಡಲು ಹಾಗೂ ಅವರನ್ನು ಉತ್ತೇಜಿಸಲು ಈ ಪ್ರಶಸ್ತಿ ನೀಡಲಾಗುವುದು ಎಂದರು.

ಕಾರ್ಯತತ್ಪರತೆ ಮತ್ತು ಬದಲಾವಣೆಯ ಕುರುಹುಗಳೊಂದಿಗೆ ಸಮುದಾಯ ಮತ್ತು ಸಂಸ್ಥೆಯ ಪ್ರತ್ಯಕ್ಷ ಪ್ರಯೋಜನಗಳು ಹಾಗೂ ಸ್ವಯಂಸೇವೆಯ ಬದ್ಧತೆ, ಸ್ವಯಂಸೇವಾ ಕಾರ್ಯದ ನಂತರದ ಸುಸ್ಥಿರತೆ ಮತ್ತು ಸೇವೆಯ ಕಾಲಾವಧಿ ಹಾಗೂ ಸ್ವಯಂಸೇವೆಗೆ ತೆಗೆದುಕೊಂಡ ಒಟ್ಟು ಸಮಯ ಈ ಎಲ್ಲಾ ಅಂಶಗಳನ್ನು ಆಧರಿಸಿ ಪ್ರಶಸ್ತಿಗೆ ವ್ಯಕ್ತಿಯನ್ನು ಆಯ್ಕೆ ಮಾಡುವುದಾಗಿ ವಿವರಿಸಿದರು.